ಅನುಮೋದನೆ ನೀಡಿಲ್ಲ. ಹೀಗಾಗಿ ಮುಂದೆ ವಿಶ್ವ ಬ್ಯಾಂಕ್ ನೆರವಿನಿಂದ ಜಿಲ್ಲಾ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಪರಿಶೀಲಿಸುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ದಿನಾಂಕ 31.8.93ರಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಇದಕ್ಕೆ ಶಿಲಾನ್ಯಾಸ ನೆರವೇರಿಸಿದರೆಂದು ಸನ್ಮಾನ್ಯ ಮಿತ್ರರು ಹೇಳಿದರು. ಆ ಒಂದು ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೋ? ಇಲ್ಲವೋ? ಏಕೆಂದರೆ, contradictory statement have been given. Whether it has come to the notice of the Government or not?

11.40 ಎ.ಎಂ

ಶ್ರೀ ಶಿವಾನಂದ ಎಸ್. ಪಾಟೀಲ್ : 1993ನೇ ಇಸವಿಯಲ್ಲಿ ಅಲ್ಲಿ ಶಿಲಾನ್ಯಾಸವನ್ನು ಮಾಡಿದ್ದಾರೆ. 1995ನೇ ಇಸವಿಯಾದರೂ ಸಹ ಅದಕ್ಕೆ ಮಂಜರಾತಿಯನ್ನು ಕೊಟ್ಟಿಲ್ಲ ಎಂದರ ಹೇಗೆ?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಶಿವಾನಂದರವರೆ ತಮಗೆ ಗೊತ್ತಿಲ್ಲ. ಇಂಥ ಎಷ್ಟೋ ಕಲ್ಲುಗಳನ್ನು ಹಾಕಿದ್ದಾರೆ. ಅವುಗಳೆಲ್ಲವನ್ನು ಈಗ ವಾಪಸ್ ತೆಗೆಸಬೇಕೋ ಏನೋ ಮಾಡಬೇಕಾಗುತ್ತದೆ.

ರಾಜ್ಯದಲ್ಲಿ ಮೂತ್ರಪಿಂಡ ಹಗರಣ

270 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ತಿಂಗಳಿನಲ್ಲಿ ರಾಜ್ಯದಲ್ಲಿ ಎಷ್ಟು ಮೂತ್ರ ಪಿಂಡ ಹಗರಣಗಳು ಪತ್ತೆಯಾಗಿವೆ.

ಆ) ಈ ಮೂತ್ರಪಿಂಡ ಶಸ್ತ್ರ ಚಿಕಿತ್ಸೆಯನ್ನು ನಗರದ ಯಾವ ಯಾವ ಆಸ್ಪತ್ರೆಗಳಲ್ಲಿ ನಡೆಸಲಾಗಿದೆ.

ಇ) ಇದರಲ್ಲಿ ಎಷ್ಟು ಜನ ಸರ್ಕಾರಿ ವೈದ್ಯರು ಹಾಗೂ ಖಾಸಗಿ ಆಸ್ಪತ್ರೆಗಳವೈದ್ಯರು ಶಾಮಿಲಾಗಿದ್ದಾರೆ (ಅವರುಗಳ ಹೆಸರುಗಳನ್ನೊದಗಿಸುವುದು)

ಈ) ಇದುವರೆವಿಗೂ ಎಷ್ಟು ಜನ ವೈದ್ಯರ ಮೇಲೆ ಈ ಸಂಬಂಧವಾಗಿ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ.

ಉ) ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆನ್ನಲಾ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಊ) ಅವರನ್ನು ಅಮಾನತ್ತಿನಲ್ಲಿಡಲಾಗಿದೆಯೇ ಇಲ್ಲವೆ ಸೇವೆಯಿಂದ ವಜಾ ಮಾಡಲಾಗಿದೆಯೇ?

ಎ) ಈ ಪ್ರಕರಣದಲ್ಲಿ ಭಾಗಿಯಾದ ಖಾಸಗಿ ಆಸ್ಪತ್ರೆಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು. ಅಂತಹ ಆಸ್ಪತ್ರೆಗಳನ್ನು ಮುಚ್ಚುವಂತೆ ಸೂಚಿಸಲಾಗುವುದೇ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಇಲ್ಲಿತನಕ ಐದು ಪ್ರಕರಣಗಳು ಬೆಳಕಿಗೆ ಬಂದಿವೆ.

ಆ) ಪೋಲಿಸ್ ಎಫ್.ಐ.ಆರ್. ಪ್ರಕಾರ ಯಲ್ಲಮ್ಮ ದಾಸಪ್ಪ ಆಸ್ಪತ್ರೆಯು ಈ ಪ್ರಕರಣದಲ್ಲಿ ಬಾಗಿಯಾಗಿದೆ. ಬೆಂಗಳೂರಿನಲ್ಲಿರುವ ಇತರ ಆಸ್ಪತ್ರೆಗಳಲ್ಲಿ ಯಾವ ಯಾವ ಆಸ್ಪತ್ರೆಗಳು ಬಾಗಿಯಾಗಿದೆ ಎಂಬುದನ್ನು ಪೋಲಿಸಿನವರು ತನಿಖೆ ಮಾಡುತ್ತಿದ್ದಾರೆ.

ಸರ್ಕಾರಿ ಆಸ್ಪತ್ರೆ

1. ಡಾ॥ ಸಿದ್ಧರಾಜು, ಪ್ರಾಧ್ಯಾಪಕರು ನೆಫ್ರಾಲಜಿ, ವಿಕ್ಟೋರಿಯಾ ಆಸ್ಪತ್ರೆ ಬೆಂಗಳೂರು.

ಖಾಸಗೀ ಆಸ್ಪತ್ರೆ

1. ಡಾ॥ ಸೈಯದ್ ಧಿಲ್ ಅಹಮ್ಮದ್

2. ಡಾ॥ ದಿಲೀಪ್ ಪಾಟೀಲ್

ಸರ್ಕಾರಿ ವೈದ್ಯರಾದ ಡಾ॥ಸಿದ್ಧರಾಜು, ಪ್ರಾಧ್ಯಾಪಕರು, ನೆಫ್ರಾಲಜಿ, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಇವರನ್ನು ಕ್ರಿಮಿನಲ್ ತನಿಖೆ ಬಾಕಿ ಇರಿಸಿ ಅಮಾನತ್ತುಗೊಳಿಸಲಾಗಿದೆ. ಡಾ॥ ಸಿದ್ದರಾಜುರವನ್ನು ಪೋಲೀಸಿನವರು ದಸ್ತಗಿರಿ ಮಾಡಿದ್ದರು. ತದನಂತರ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಡಾ॥ ಸೈಯದ್ ಆಧಿಲ್ ಅಹಮ್ಮದ್‌ರವರು ಕೋರ್ಟಿನ ಜಾಮೀನಿನ ಆದೇಶ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಮೇಲೆ ಉತ್ತರಿಸಲಾಗಿದೆ.

ಊ) ಅಮಾನತ್ತಿನಲ್ಲಿಡಲಾಗಿದೆ.

ಎ) ಸರಿಯಾದ ಸಾಕ್ಷಾಧಾರಗಳನ್ನು ಸಂಗ್ರಹಿಸಿದ ನಂತರ ಸಂಬಂಧಪಟ್ಟ ಆಸ್ಪತ್ರೆಗಳ ಮೇಲೆ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ ಅವರಿಗೆ ಉತ್ತರವನ್ನು ಕಳಿಸಿಕೊಟ್ಟಿದ್ದೀರಲ್ಲ, ಅವರು ಉಪ ಪ್ರಶ್ನೆಗಳನ್ನು ಕೇಳಲಿ.

ಒಬ್ಬ ಮಾನ್ಯ ಸದಸ್ಯರು : ನಮಗೆ ಉತ್ತರ ಬಂದಿಲ್ಲ, ನಮಗೆ ಏನೂ ಅರ್ಥವಾಗುತ್ತಿಲ್ಲ.

ಶ್ರೀ ಗುರುಪಾದಪ್ಪ ಸಾಗಮಾರಪಳ್ಳಿ : ಸನ್ಮಾನ್ಯ. ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಈ ಪ್ರಕರಣದಲ್ಲಿ ಡಾ॥ ಸಿದ್ದರಾಜು ಡಾ॥ ಸೈಯದ್ ಆದಿಲ್ ಅಹಮ್ಮದ್ ಮತ್ತು ಡಾ॥ ದಿಲೀಪ್ ಪಾಟೀಲ್‌ರವರು ಶಾಮಿಲಾಗಿದ್ದಾರೆ ಅಂದರೆ ಒಬ್ಬರು ಸರ್ಕಾರಿ ವೈದ್ಯರು ಇಬ್ಬರು ಖಾಸಗಿ ವೈದ್ಯರುಗಳು ಶಾಮಿಲಾಗಿದ್ದಾರೆಂದು ಹೇಳಿದ್ದಾರೆ. ಇದಕ್ಕಿಂತಾ ಹೆಚ್ಚು ಜನರು ಇದರಲ್ಲಿ ಶಾಮಿಲಾಗಿದ್ದಾರೆಂದು ನನಗನ್ನಿಸುತ್ತದೆ. ಅದರ ಬಗ್ಗೆ ತಾವು ಹೇಳಿಲ್ಲ. ಎರಡನೆಯದಾಗಿ ಈ ಪ್ರಕರಣದ ನಂತರ ಜನರು ಆಸ್ಪತ್ರೆಗಳಿಗೆ ಹೋಗಿ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿ ಕೊಳ್ಳಲು ಭಯಭೀತರಾಗಿದ್ದಾರೆ. ಅವರ ಭಯವನ್ನು ನಿವಾರಿಸಲು ಏನಾದರು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರ? ಅದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಇದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು. ಮತ್ತೊಂದು ವಿಚಾರವೇನೆಂದರೆ, ಈ ಪ್ರಕರಣದಲ್ಲಿ ಯಲ್ಲಮ್ಮ ದಾಸಪ್ಪ ಖಾಸಗಿ ಆಸ್ಪತ್ರೆ ಒಳಗೊಂಡಿದೆ ಎಂದು ಹೇಳಿದ್ದೀರಿ. ಮತ್ತು ಇನ್ನು ಬೇರೆ ಬೇರೆ ಆಸ್ಪತ್ರೆಗಳು ಇರಬಹುದೆಂದು ಸಂಶಯವನ್ನು ವ್ಯಕ್ತಪಡಿಸಿದ್ದೀರಿ. ಅಂದರೆ ಆ ಆಸ್ಪತ್ರೆಗಳನ್ನು ಮುಚ್ಚಿಸಲು ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಅವುಗಳನ್ನು ಮುಚ್ಚಿಸಲು ಸರಿಯಾದ ಸಾಕ್ಷ್ಯಾಧಾರಗಳು ಇಲ್ಲವೆಂದು ಹೇಳಿದ್ದೀರಿ, ತಮಗೆ ಯಾವ ರೀತಿಯಾದ ಸಾಕ್ಷ್ಯಾಧಾರಗಳು ಬೇಕು? ಇಂಥ ಆಸ್ಪತ್ರೆಗಳಿಂದ ಹೆಚ್ಚು ಅನಾಹುತವಾಗುತ್ತದೆ ಎನ್ನತಕ್ಕ ಭಯ ಜನರಿಗೆ ಇದೆ. ಅಂಥ ಆಸ್ಪತ್ರೆಯನ್ನು ಯಾವಾಗ ಮುಚ್ಚಿಸುತ್ತೀರಿ? ಅದನ್ನು ಮುಚ್ಚಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎ.ಬಿ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ,ಈ ವಿಚಾರದ ಬಗ್ಗೆ ಪೋಲೀಸ್ ನವರು ಹೆಚ್ಚಿನ ತನಿಖೆಯನ್ನು ಮಾಡುತ್ತಿದ್ದಾರೆ ಮತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂಥ ನರ್ಸಿಂಗ್ ಹೋಂಗಳ ಕಾಯಿದೆಗೆ ತಿದ್ದುಪಡಿಯನ್ನು ತರುತ್ತಿದ್ದೇವೆ. ಮಾನವ ಅಂಗಗಳ ಬದಲಾವಣೆ ಕಾಯಿದೆ 1994 ನ್ನು ಕೇಂದ್ರ ಸರ್ಕಾರ ಈಗಾಗಲೇ ತಂದಿದೆ. ಅದನ್ನೂ ಸೇರಿಸಿಕೊಂಡು ರಾಜ್ಯದಲ್ಲಿ ಅತೀ ಶೀಘ್ರವಾಗಿ ಅದನ್ನು ಜಾರಿಗೆ ತರಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಗುರುಪಾದಪ್ಪ ನಾಗಪೂರಪಳ್ಳಿ : ಈ ಪ್ರಕರಣದಿಂದ ಜನರು ಭಯಭೀತರಾಗಿದ್ದಾರೆ. ಇದರ ಬಗ್ಗೆ ವಿಶೇಷವಾದ ಕ್ರಮ ತೆಗೆದುಕೊಂಡಿದ್ದೀರ? ಜನರು ಆಸ್ಪತ್ರೆಗೆ ಹೋಗಿ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ತಯಾರಾಗಿಲ್ಲ, ಆಸ್ಪತ್ರೆಗೆ ಹೋದರೆ ನಮ್ಮ ಕಿಡ್ನಿಯನ್ನು ಸಹ ತೆಗೆದುಕೊಳ್ಳುತ್ತಾರೆ ಎನ್ನತಕ್ಕ ಭಯ ಜನರಲ್ಲಿದೆ. ಅವರ ಭಯವನ್ನು ಹೋಗಲಾಡಿಸಲು ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ?

ಶ್ರೀ ಶಾಮನೂರು ಶಿವಶಂಕರಪ್ಪ : ಅಧ್ಯಕ್ಷರೆ, ಇನ್ನೊಂದು ವಿಚಾರವಿದೆ. ಈ ಪ್ರಕರಣದಿಂದ ಜನರು ಏನಾದರೂ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕೆಂದರೆ ವೈದ್ಯರುಗಳು ಮಾಡುತ್ತಿಲ್ಲ, ಇದರ ಬಗ್ಗೆ ಸಹ ಸರ್ಕಾರದವರು ಯೋಜನೆ ಮಾಡಬೇಕಾಗುತ್ತದೆ. ಏಕೆಂದರೆ ವೈದ್ಯರುಗಳಿಗೆ ನಾವೇನಾದರೂ ಶಸ್ತ್ರಚಿಕಿತ್ಸೆಯನ್ನು ಮಾಡಿದರೆ ನಮ್ಮ ಮೇಲೆ ದೂರು ಬರಬಹುದು ಎನ್ನತಕ್ಕ ಸಂಶಯವಿರುವುದರಿಂದ ಇದರ ಬಗ್ಗೆ ಆರೋಗ್ಯ ಮಂತ್ರಿಗಳು ಗಮನಹರಿಸಿ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಎ.ಬಿ. ಪಾಟೀಲ್ : ಅಧ್ಯಕ್ಷರೆ, ಈ ಕಿಡ್ನಿ ಪ್ರಕರಣದಿಂದಾಗಿ ಇವತ್ತು ರಾಜ್ಯದಲ್ಲಿ ವೈದ್ಯರ ಹತ್ತಿರ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಜನರು ಬರಲು ಹಿಂಜರಿಯುತ್ತಿದ್ದಾರೆ. ಜನರಲ್ಲಿ ಈ ಭಯವನ್ನು ಯಾವ ರೀತಿಯಲ್ಲಿ ನಡೆಸಬೇಕು ಎನ್ನುವ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೆ, ಈ ಮೂತ್ರಪಿಂಡ ಕಾಯಿಲೆ ಏನಿದೆ ಅದು ಶ್ರೀಮಂತರಿಗೆ, ವಿದ್ಯಾವಂತರಿಗೆ, ಬಡವರಿಗೆ ಎಂದು ಬರತಕ್ಕ ಕಾಯಿದೆಯಲ್ಲ. ಬಹಳೇಷ್ಟು ಕಡೆಗಳಲ್ಲಿ ಬಡಪರಿಗೆ, ಕಾರ್ಮಿಕ ಜನರಿಗೆ ಈ ಕಾಯಿದೆ ಇದೆ. ಅನೇಕ ಆಸ್ಪತ್ರೆಗಳಲ್ಲಿ ಅದು ಸಾರ್ವಜನಿಕ ಆಸ್ಪತ್ರೆ ಇರಬಹುದು ಅಥವಾ ಖಾಸಗಿ ಆಸ್ಪತ್ರೆಗಳಿರಬಹುದು, ಇಲ್ಲಿ ಈ ಮೂತ್ರಪಿಂಡದ ಬದಲಾವಣೆಯ ವಿಷಯದಲ್ಲಿ ಕುತಂತ್ರ ಹುಟ್ಟಿದೆಯೆಂದು ಹೇಳಿದರೆ ತಪ್ಪಾಗದು. ಅನೇಕ ಸಾರ್ವಜನಿಕ ಮತ್ತು ಖಾಸಗೀ ಆಸ್ಪತ್ರೆಗಳಲ್ಲಿ ಮೂತ್ರಪಿಂಡದ ಬದಲಾವಣೆ ಮಾಡುವುದರ ಬಗ್ಗೆ ಸಾರ್ವಜನಿಕರ ಆರೋಗ್ಯಕ್ಕೆ ಬಹಳ ಹಿಂಸೆಯಾಗುತ್ತಿದೆ. ಇಂಥ ಪ್ರಕರಣಗಳು ಸರ್ಕಾರದ ಗಮನಕ್ಕೆ ಎಷ್ಟು ಬಂದಿದೆ? ಮೂತ್ರಪಿಂಡವನ್ನು ಬದಲಾವಣೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಅಧ್ಯಕ್ಷರು : ಅವೆಲ್ಲವುಗಳನ್ನು ಉತ್ತರದಲ್ಲಿ ಕೊಟ್ಟಿದ್ದಾರಲ್ಲ

ಶ್ರೀ ಜೆ.ಹೆಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಈ ಮೂತ್ರಪಿಂಡವೇನೋ ಕಳವಾಗುತ್ತಿದೆ. ಅದನ್ನು ಎಲ್ಲಿಗೊ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆಂದು ಏನು ಭಾವನೆ ಬಂದಿದೆ ಅದು ತಪ್ಪು. ಇದರ ಬಗ್ಗೆ ಸರ್ಕಾರ ಎಲ್ಲಾ ರೀತಿಯಿಂದಲೂ ಸಹ ಗಮನಹರಿಸಿ ನೋಡಿದೆ. ಮೂತ್ರಪಿಂಡವನ್ನು ಎಲ್ಲೋ ತೆಗೆದುಕೊಂಡು ಹೋಗಿ ಮಾರಾಟ ಮಾಡಲು ಬರುವುದಿಲ್ಲ, ಯಾರಿಗೆ ಮೂತ್ರಪಿಂಡ ಬೇಕು, ಅವರ ರಕ್ತದು ಗುಂಪು ಏನು, ಅದನ್ನು ಕೊಡಲು ಯಾರು ತಯಾರಾಗಿದ್ದಾರೆ ಅದಕ್ಕೆ ಎಷ್ಟು ಹಣವನ್ನು ಕೊಡಬೇಕು ಎನ್ನುವ ವಿಚಾರವಾದ ಮೇಲೆ ವೈದ್ಯರು ಶಸ್ತ್ರಚಿಕಿತ್ಸೆಯನ್ನು ಮಾಡಿದಾಗ ಮೂತ್ರಪಿಂಡವನ್ನು ಯಾರಿಗೆ

ಕೊಡಬೇಕಾಗಿದೆಯೋ ಅವೆರದು ಸಹ ಜೊತೆಯಲ್ಲಿಯೇ ಮೂತ್ರಪಿಂಡವನ್ನು ಯಾರಿಗೆ ಕೊಡಬೇಕಾಗಿದೆಯೋ ಅವರದು ಸಹ ಜೊತೆಯಲ್ಲಿಯೇ ಅಪರೇಷನ್ ಆಗುವುದು. ಆದರೆ ಇಲ್ಲಿ ಒಂದು ರೀತಿಯಾದ ಕೆಟ್ಟಭಾವನೆ ಬಂದುಬಿಟ್ಟಿದೆ. ಕರ್ನಾಟಕದ ವೈದ್ಯರು ಮೂತ್ರಪಿಂಡವನ್ನು ತೆಗೆದು ಎಲ್ಲೋ ಬೇರೆ ಕಡೆ ಮಾರಾಟ ಮಾಡುತ್ತಿದ್ದಾರೆನ್ನುವ ತಪ್ಪು ಭಾವನೆ ಬಂದಿದೆ. ಸರ್ಕಾರ ಇದರ ಬಗ್ಗೆ ಖಚಿತವಾದ ನಿಲುವನ್ನು ತಾಳಿದೆ. ಯಾರು ಮೂತ್ರಪಿಂಡವನ್ನು ಮಾರಾಟ ಮಾಡಲು ಸ್ವಯಿಚ್ಛೆಯಿಂದ ಬಂದಿದ್ದಾರ, ಕೆಲವರು ಮಾರಾಟ ಮಾಡುವ ಸಲುವಾಗಿ ಬಂದಿದ್ದಾರೆ. ಅಂಥ ಸಂದರ್ಭದಲ್ಲಿ ಈ ರೀತಿ ಆಗಿದೆಯೋ ಹೊರತು ಇದರಲ್ಲಿ ಬೇರೆ ಏನೋ ಅಚಾತುರ್ಯವಾಗಿದೆ ಎಂದು ಭಾವಿಸುವುದು ತಪ್ಪು.

MR. SPEAKER : I beg to differ from you. It is not as simple as that.

ಆರೋಗ್ಯವಂತರು ಬೇರೆ ಕಾಯಿಲೆಗಾಗಿ ಆಸ್ಪತ್ರೆಗೆ ಹೋದಾಗ ವೈದ್ಯರುಗಳು ತಮ್ಮ ಪ್ರೊಫೆಷನ್ ಎತಿಕ್ಸ್‌ನ್ನು ಮರೆತು ರೋಗಿಗಳ ಶರೀರದಲ್ಲಿರುವ ಕಿಡ್ನಿಯನ್ನು ತೆಗೆದುಕೊಂಡು ಅದು ಹೋಗತಕ್ಕ ರಕ್ತದ ಗುಂಪಿನವರಿಗ್ಯಾರಿಗೆ ಕಿಡ್ನಿ ಬೇಕಾಗಿರುತ್ತಯೋ ಅವರಿಗೆ ಟ್ರಾನ್ಸ್‌ಪ್ಲಾಂಟ್ ಮಾಡಿ ಈ ವಿಷಯವನ್ನು ರೋಗಿಗೆ ತಿಳಿಸದೆ ಹಣವನ್ನು ತೆಗೆದುಕೊಳ್ಳತಕ್ಕ ಜಾಲವಿದ ಎಂಬ ವಿಚಾರವಿದೆ. ಆ ಭಾವನೆ ಬಂದಿದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಇದೇ ಭಾವನೆ ಜನರಲ್ಲಿ ಬಂದಿದೆ.

ಶ್ರೀ ಜಿ.ಹೆಚ್. ಪಟೇಲ್ : ಆ ಭಾವನೆ ತಪ್ಪು.

ಅಧ್ಯಕ್ಷರು : ತಾವು ಕ್ಲಾರಿಫಿಕೇಷನ್ ಕೊಡಿ.

ಶ್ರೀ ಜಿ.ಹೆಚ್. ಪಟೇಲ್ : ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಈ ರೀತಿಯಾದ ಭಯದ ವಾತಾವರಣ ಇರಬಾರದು ಎನ್ನುವ ದೃಷ್ಟಿಯಿಂದ ವೈದ್ಯರುಗಳನ್ನು ಕರೆಯಿಸಿ ಈ ರೀತ ಮಾರಾಟ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದ್ದೇವೆ. ಯಾರಾದರೂ ಮೂತ್ರಪಿಂಡವನ್ನು ಕೊಡಲು ತಯಾರಾಗಿದ್ದೇವೆಂದು ಹೇಳಿದಾಗ ಆಕಸ್ಮಾತ್ ಅವರ ರಕ್ತದ ಗುಂಪು ಹೋಲಿಕೆಯಾಗುವುದಿದ್ದರೆ ವಿಕಕಾಲದಲ್ಲಿ ಅಪರೇಷನ್‌ನ್ನು ಮಾಡುವಾಗ ಯಾರ ಮೂತ್ರಪಿಂಡವನ್ನು ಕತ್ತರಿಸಿರುತ್ತಾರೋ ಅವರಿಗೆ ಅದು ಗೊತ್ತಾಗದೆ ಇರಬಹುದು. ಅಂಥ ಸಂದರ್ಭವನ್ನು ಬಿಟ್ಟು ಉಳಿದ ಸಮಯದಲ್ಲಿ ಇದನ್ನೆನೂ ಮಾರಾಟ ಮಾಡುವುದಕ್ಕಾಗುವುದಿಲ್ಲ. It cannot be transplanted within a particular period. It cannot be ಕೋಳಿಮೊಟ್ಟೆ ಇಟ್ಟಂತೆ ಅದನ್ನು ಇಡಲು ಬರುವುದಿಲ್ಲ. ಆ ರೀತಿಯಾದ ಭಯದ ವಾತಾವರಣ ಬೇದ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಈ ಮೂತ್ರಪಿಂಡದ ಶಸ್ತ್ರಚಿಕಿತ್ಸೆಗೆ ಮೇಲ್ಪಟ್ಟ ಅಧಿಕಾರಿಗಳ ಅಥವಾ ಇಲಾಖೆಯ ಅನುಮತಿ ಬೇಕೆ? ಆ ರೀತಿ ಅನುಮತಿಯನ್ನು ಪಡೆಯಬೇಕೆಂದಿದ್ದರೆ ಅವರು ಅದನ್ನು ಪಡೆದು ಕೊಂಡಿದ್ದರ? ಅದಕ್ಕೆ ದಾಖಲೆ ಇದೆಯೆ? ಮತ್ತು ಅದರ ಫಲಾನುಭವಿಗಳ್ಯಾರಿದ್ದಾರೆ ಮತ್ತು ಅದನ್ನು ಕೊಡುವವರ್ಯಾರಿದ್ದಾರೆ ಅವರ ಒಪ್ಪಿಗೆಯನ್ನು ಪಡೆದುಕೊಂಡಿದ್ದಾರೆಯೇ? ಅದಕ್ಕೆ ದಾಖಲೆ ಇದೆಯೆ? ದಯಮಾಡಿ ತಿಳಿಸಬೇಕು.

ಅಧ್ಯಕ್ಷರು : ಆ ರೀತಿ ನಾರ್ಮ್ಸ್ ಯಾವುದೂ ಇಲ್ಲದೆ ಇರುವುದರಿಂದ ಈ ರೀತಿಯಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಅದನ್ನು ಸರ್ಕಾರ ಹೇಳಬೇಕು. ಯಾರಿಂದ ಮೂತ್ರಪಿಂಡವನ್ನು ಪಡೆದಿದ್ದಾರೊ ಅವರಿಂದ ಅನುಮತಿಯನ್ನು ಪಡೆದುಕೊಂಡಿದ್ದಾರೆಯೇ?

MR. SPEAKER : I think you are an Advocate. The cause of action has arisen because they have not observed all these norms. They have violated. I am moving on the next subject. ತಾವು ಪುನಃ ಅದನ್ನೇ ಕೇಳಿದರೆ, ಹೇಗೆ?

ಭಾರತೀ ನಗರದಲ್ಲಿ ಪದವಿ ಪೂರ್ವ ಕಾಲೇಜು

278 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿರತಕ್ಕ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಮಹಿಳೆಯರಿಗಾಗಿಯೇ ಪ್ರತ್ಯೇಕವಾಗಿ ಇರತಕ್ಕ ಸರ್ಕಾರಿ ಹಾಗೂ ಖಾಸಗೀ ಪದವಿಪೂರ್ವ ಕಾಲೇಜುಗಳೆಷ್ಟು?

ಇ) 1994-95ರಲ್ಲಿ ಹೊಸದಾಗಿ ಸರ್ಕಾರ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆಯೇ ಹಾಗೂ ಖಾಸಗೀ ಪದವಿಪೂರ್ವ ಕಾಲೇಜುಗಳಿಗೆ ಅನುಮತಿ ನೀಡಲಾಗಿದೆಯೇ?

ಈ) ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಅ) ಬೆಂಗಳೂರಿನ ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಸರ್ಕಾರ ಪದವಿ ಪೂರ್ವ ಕಾಲೇಜು ಇರುವುದಿಲ್ಲ.

ಆ)

ಸರ್ಕಾರಿಖಾಸಗಿ

ಯಾವುದು ಇಲ್ಲ 1(ಒಂದು)

ಇ) ಈ ಕ್ಷೇತ್ರದಲ್ಲಿ 1994-95ರಲ್ಲಿ ಹೊಸದಾಗಿ ಸರ್ಕಾರ ಯಾವುದೇ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿರುವುದಿಲ್ಲ. ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಅನುಮತಿ ನೀಡಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್. ರಾಜಣ್ಣ : ಬೆಂಗಳೂರಿನಲ್ಲಿ ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿರತಕ್ಕಂತಹ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು? ಇವುಗಳ ಪೈಕಿ ಮಹಿಳೆಯರಿಗಾಗಿ ಪ್ರತ್ಯೇಕವಾಗಿರತಕ್ಕಂತಹ ಸರ್ಕಾರಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳು ಎಷ್ಟು? ಸ್ವಾಮಿ ನನ್ನ ಕ್ಷೇತ್ರದಲ್ಲಿ ಯಾವುದು ಕಾಲೇಜು ಒಂದೂ ಇಲ್ಲ, ದಯವಿಟ್ಟು ನಾನು ತಮ್ಮಲ್ಲಿ ವಿನಂತಿ ಮಾಡತಕ್ಕಂಥಾದ್ದು ಏನೆಂದರೆ, ಅಲ್ಲಿ ಕೆಲವು ಹೈಸ್ಕೂಲುಗಳಲ್ಲಿ ಮಕ್ಕಳು ಕಡಿಮೆಯಾಗಿದ್ದಾರೆ. ಅಂತಹದ್ದನ್ನು ಎಲ್ಲಿ ಪಾಠಶಾಲೆಯಲ್ಲಿ ಮಕ್ಕಳು ಕಡಿಮೆಯಾಗಿದ್ದಾರೆ ಅದನ್ನು ಕಾಲೇಜು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಒಂದು ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭ ಮಾಡದೆ ಖಾಸಗಿ ಪದವಿ ಪೂರ್ವ ಕಾಲೇಜಿಗೆ ಅನುಮತಿ ನೀಡಲಾಗಿದೆ ಎಂದು ಕಳೆದ ವರ್ಷ ಹೇಳಿದ್ದಾರೆ. ಅಲ್ಲಿಗೂ ಅದು ಆಗಿಲ್ಲ, ಇದು ಪೆಂಡಿಂಗ್ ಇದೆ ಎಂದು ಗೊತ್ತಾಗಿದೆ. ದಯವಿಟ್ಟು ನಾನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ಅಧ್ಯಕ್ಷರ ಮೂಲಕ ಕೇಳಿಕೊಳ್ಳುವುದೇನೆಂದರೆ, ನನ್ನ ಭಾರತಿ ನಗರ ಕ್ಷೇತ್ರ ಬಡವರು ಇರುವ ಕ್ಷೇತ್ರ. ಗುಡಿಸಲು ವಾಸಿಗಳು ಇರುವ ಕ್ಷೇತ್ರ. ಆದ್ದರಿಂದ ಅವರು ಖಾಸಗಿ ಕಾಲೇಜಿಗೆ ಹೋಗುವ ಮಟ್ಟದಲ್ಲಿ ಇಲ್ಲ,